

# ನೆನಪೇ ನಂದಾದೀಪ

## ಡಾ. ಈಶ್ವರಯ್ಯ ಮಠ ಅವರ ಸಂಸ್ಮರಣ ಸಂಪುಟ


ಪ್ರಧಾನ ಸಂಪಾದಕರು

ಡಾ. ಕಲ್ಯಾಣರಾವ ಜಿ. ಪಾಟೀಲ

ಡಾ. ಜಗನ್ನಾಥ ಹೆಬ್ಬಾಳೆ

ಸಂಪಾದಕರು

ಪ್ರೊ. ಶಿವಾನಂದ ಎಸ್. ವಿರಕ್ತಮಠ

ಪ್ರೊ. ಲಿಂಗಣ್ಣ ಗೋನಾಲ

೫೧. ಕೀಳರಿಮೆಯನ್ನು ಕಿತ್ತೊಗೆದ ಧೀಮಂತ – ಸಿದ್ಧಯ್ಯ ಸ್ಥಾವರ ಮಠ / ೧೯೨
೫೨. ಅಣ್ಣನ ನೆನಪಿನ ದೋಣಿಯಲ್ಲಿ ವಿಹರಿಸಿದಾಗ.. – ಮಲ್ಲಿಕಾರ್ಜುನಯ್ಯ ಎಸ್. ಹಿರೇಮಠ / ೧೯೫
೫೩. ಶರಣ ಸಾಹಿತ್ಯದ ಪರಿಚಾರಕ – ನಿಂಗಣ್ಣ ಗೋನಾಳ (ವಸುಕಂದ) ಶಿಕ್ಷಕರು / ೨೧೦
೫೪. ನೆನಪು ಮಾತ್ರ – ಡಾ. ಚಿತ್ಕಳಾ ಮಠಪತಿ / ೨೧೩
೫೫. ಮನದಾಳದ ಮಾತು – ಪ್ರೊ. ಕಲಾವತಿ ಕೋಬಾಳ / ೨೧೭
೫೬. ಅಕ್ಷರ ಸ್ವರ ಸಂಬಂಧಿ – ಡಾ. ರೇಣುಕಾ ರಾಜಶೇಖರ / ೨೨೨
೫೭. ಸಗರನಾಡಿನ ಸರಸ್ವತಿ ಪುತ್ರ – ಡಾ. ಪುಷ್ಪಾವತಿ ಶಲವಡಿಮಠ / ೨೨೪
೫೮. ಲೇಸೆನಿಸಿ ಬದುಕಿದವರು – ಡಾ. ಶೋಭಾದೇವಿ ಚಕ್ಕಿ / ೨೩೦
೫೯. ಸಮಾಜಮುಖಿ – ಡಾ. ಶರಣಮ್ಮ ಬಿ. ಪಾಟೀಲ / ೨೩೫
೬೦. ವಿದ್ವನ್ಮಣಿ – ಡಾ. ಕರುಣಾ ಅ. ಜಮದರಖಾನಿ / ೨೩೭
೬೧. ನೆನಪೇ ನಂದಾದೀಪ – ಶ್ರೀಮತಿ ಪವಿತ್ರಾದೇವಿ ಈಶ್ವರಯ್ಯ ಮಠ / ೨೪೧

## ಭಾಗ : ಎರಡು : ಸಾಹಿತ್ಯಕ ಸಾಧನೆ

೬೨. ಆದರ್ಶ ಗುರುವಿನ ಅನುಪಮ ವ್ಯಕ್ತಿಚಿತ್ರ – ಪ್ರೊ. ಮಲ್ಲಪ್ಪ ಎಂ. ಮಾನೆಗಾರ / ೨೪೭
೬೩. ಸ್ವರವಚನ ಸಾಹಿತ್ಯದ ಅಧ್ಯಯನ : ಒಂದು ಪ್ರತಿಕ್ರಿಯೆ – ಡಾ. ಶಿವಾನಂದ ಎಸ್. ವಿರಕ್ತಮಠ / ೨೫೧
೬೪. ಹಾರಿತೋ ಹಂಸ ಹಾರಿತು – ಡಾ. ಶಾಂತಲಿಂಗ ಎಚ್. ಘಂಟಿ / ೨೫೫
೬೫. ಸ್ವರವಚನ ಮೀಮಾಂಸೆ – ಡಾ. ಶಿವಗಂಗಾ ರುಮ್ಮಾ / ೨೫೮
೬೬. ಬೆಳಿಗ್ಗೆಯ ಬೆಳಗು – ಡಾ. ಎಂ.ಎಸ್. ಮಾಗಣಗೇರಿ / ೨೬೫
೬೭. ನುಡಿಕಟ್ಟು ಒಂದು ಅವಲೋಕನ – ಡಾ. ರೋಲೇಕರ್ ನಾರಾಯಣ ಡಿ. / ೨೭೫
೬೮. ನುಡಿಕಟ್ಟು – ಡಾ. ಎಸ್.ಎಸ್. ನಾಯಕ / ೨೭೭
೬೯. ಆದರ್ಶ ಐ.ಪಿ.ಎಸ್. ಅಧಿಕಾರಿ ಶ್ರೀ ಗಿರೆಪ್ಪ ವಿ. ಪಾಟೀಲ – ಡಾ. ಪುಟ್ಟಮಣಿ ದೇವಿದಾಸ / ೨೮೦
೭೦. ಬಿಚ್ಚುನುಡಿಗೊಂದು ಚೆನ್ನುಡಿ – ಪ್ರೊ. ಲಿಂಗಣ್ಣ ಗೋನಾಲ / ೨೮೫
೭೧. ಸಾಹಿತ್ಯ ರೂಪ, ತತ್ವ, ಕೃತಿ ದರ್ಶನಗಳ ಸಂಗಮ: ಬಿಚ್ಚು ನುಡಿ
– ಡಾ. ಸುರೇಂದ್ರಕುಮಾರ ಕೆರಮಗಿ / ೨೯೧
೭೨. ಮತ–ಧರ್ಮ ತತ್ವಶಾಸ್ತ್ರಕ್ಕೆ ಹಿಡಿದ ಕನ್ನಡಿ : ಆಯ್ದ ಸ್ವರವಚನಗಳು
– ಡಾ. ಸಂಗೀತಾ ಎಂ. ಹಿರೇಮಠ / ೩೦೦
೭೩. ವೈಚಾರಿಕ ಲೇಖನಗಳ ಆಕರ ಕೃತಿ – ಡಾ. ಮಹಾದೇವಪ್ಪ ಎಸ್. ಪೂಜಾರಿ / ೩೦೭
೭೪. ಯಶೋಧರ ಚರಿತೆ ಸಂಗ್ರಹ – ಡಾ. ಲಕ್ಷ್ಮೀಕಾಂತ ಸಿ. ಪಂಚಾಳ / ೩೧೧
೭೫. ಮಾದರಿ ಪಠ್ಯಪುಸ್ತಕ 'ವಚನ ಸಂಗ್ರಹ' – ಡಾ. ರಾಮಚಂದ್ರ ಗಣಾಪೂರ / ೩೧೮
೭೬. ವಚನ ಸಂಗ್ರಹ – ವೀಣಾ ಜಿ.ಕೆ. / ೩೨೫



## ೬೬. ಬೆಳಿಗ್ಗೆಯ ಬೆಳಗು

❋ ಡಾ. ಎಂ.ಎಸ್. ಮಾಗಣಗೇರಿ

ಮಾಡುವ ನೀಡುವ ಭಕ್ತನ ಕಂಡಡೆ
ನಿಧಿ ನಿಧಾನವ ಕಂಡಂತಾಯಿತ್ತು
ಪಾದೋದಕ ಪ್ರಸಾದ ಜೀವಿಯ ಕಂಡಡೆ
ಹೋದ ಪ್ರಾಣ ಬಂದಂತಾಯಿತ್ತು
ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ
ಅಚ್ಚ ಶರಣನ ಕಂಡಡೆ
ನಿಶ್ಚಯವಾಗಿ ಕೂಡಲ ಸಂಗಯ್ಯನೆಂಬೆನು – ಬಸವಣ್ಣ

ಕಲ್ಯಾಣ ಕರ್ನಾಟಕ ಪ್ರದೇಶದ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ದಟ್ಟವಾಗಿ ಕೇಳಿಬರುತ್ತಿರುವ ಹೆಸರುಗಳಲ್ಲಿ ಡಾ. ಈಶ್ವರಯ್ಯ ಮಠ ಅವರೂ ಒಬ್ಬರು. ಕ್ರಿಯಾಶೀಲ ವ್ಯಕ್ತಿತ್ವದ ಅವರು ತಮ್ಮನ್ನು ಸದಾ ಚಟುವಟಿಕೆಗಳಲ್ಲಿ ಬಿಡುವಿಲ್ಲದಂತೆ ತೊಡಗಿಸಿ ಕೊಂಡವರು. ಕಲಬುರಗಿಯಲ್ಲಿ ಜರುಗುವ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮುಂಚೂಣಿಯ ಸ್ಥಾನದಲ್ಲಿರುವವರು. ಸ್ಪುಟವಾದ ಮಾತು, ಆಳವಾದ ಜ್ಞಾನ, ವೈಚಾರಿಕ ನೋಟಗಳಿಂದ ವಿದ್ವತ್ ಲೋಕದಲ್ಲಿ ತಮ್ಮನ್ನು ಗುರುತಿಸಿಕೊಂಡವರು. ಸರಳ ಸಜ್ಜನಿಕೆಯ ಡಾ. ಈಶ್ವರಯ್ಯ ಮಠ ಅವರ ಲೇಖನಿಯಿಂದ ಹೊರಬಂದ ಕೃತಿಗಳು ಹಲವು. ಅವುಗಳಲ್ಲಿ 'ಬೆಳಿಗ್ಗೆಯ ಬೆಳಗು' ಕೂಡಾ ಒಂದು. ಪ್ರಸ್ತುತ ಕೃತಿಯ ಶೀರ್ಷಿಕೆ ತುಂಬಾ ಸಮಂಜಸ ಮತ್ತು ಸೊಗಸಾದುದು. ಇಪ್ಪತ್ತೈದು ಚಿಕ್ಕ ಚಿಕ್ಕ ಮೌಲ್ಯಿಕ ಲೇಖನಗಳನ್ನು ಒಳಗೊಂಡ ಈ ಕೃತಿ ಲೇಖಕರ ಆಲೋಚನಾ ಲಹರಿಗೆ, ವೈಚಾರಿಕ ನಿಲುವಿಗೆ, ಪಂಡಿತ ಕವಿಗಳ, ಗುರುಹಿರಿಯರ ಮೇಲಿಟ್ಟ ಶ್ರದ್ಧೆ, ನಿಷ್ಠೆಗೆ ಕೈಗನ್ನಡಿಯಾಗಿದೆ.

ಡಾ. ಈಶ್ವರಯ್ಯ ಮಠ ಅವರು ತಮ್ಮ ವ್ಯಕ್ತಿತ್ವವನ್ನು ರೂಪಿಸಿದ ಹಿರಿಯ ಚೇತನಗಳ, ಗುರುಗಳ ಮೇಲಿನ ಗೌರವ, ಅಭಿಮಾನ, ನಿಷ್ಠೆ, ಪ್ರಾಮಾಣಿಕತೆಗಳು ಇಲ್ಲಿನ ಲೇಖನಗಳು ಬಿಂಬಿಸುತ್ತವೆ. ಅಂದರೆ ಅವರು ಕೇವಲ ಗುರು–ಹಿರಿಯರ, ಗುರುಗಳನ್ನು ಗುಣಗಾನ ಮಾಡಲು ಬರೆದ ಲೇಖನಗಳು ಇವಲ್ಲ. ನಿಜವಾಗಿಯೂ ಅವರಲ್ಲಿರುವ ಶ್ರೇಷ್ಠ ಗುಣಗಳನ್ನು, ಆದರ್ಶ ವ್ಯಕ್ತಿತ್ವವನ್ನು ಇಲ್ಲಿ ಅನಾವರಣಗೊಳಿಸಿದ್ದಾರೆ. ಅಲ್ಲದೆ ಸ್ವತಃ ಅಳವಡಿಸಿಕೊಂಡು ಇತರರಿಗೆ ಮಾದರಿಯಾಗಿದ್ದಾರೆ. ಶ್ರೀ ಬಿ. ಮಹಾದೇವಪ್ಪ, ಶ್ರೀ ಮಹಾದೇವಪ್ಪ ರಾಂಪುರೆ, ಡಾ. ಎಂ. ಜಿ. ಬಿರಾದಾರ, ಶ್ರೀ ಕೆ. ವಿಶ್ವನಾಥ, ರೊಟ್ನಡಗಿ ತಾತಾ, ಡಾ. ವಿ. ಜಿ.

# ನೆನಪೇ ನಂದಾದೀಪ

ಡಾ. ಈಶ್ವರಯ್ಯ ಮಠ ಅವರು ಕಲ್ಯಾಣ ಕರ್ನಾಟಕದ ಅಪ್ರತಿಮ, ಪ್ರತಿಭಾನ್ವಿತ ಪ್ರಾಧ್ಯಾಪಕರು. ಸಮಯಪ್ರಜ್ಞೆ, ಕರ್ತವ್ಯನಿಷ್ಠೆ, ನಿರಂತರ ಅಧ್ಯಯನ ಮತ್ತು ಅಧ್ಯಾಪನಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದರು. ಅವರು ವಿಭಾಗದ, ರಾಜ್ಯದ ಮತ್ತು ರಾಷ್ಟ್ರಮಟ್ಟದ ಯಾವುದೇ ಶೈಕ್ಷಣಿಕ, ಸಾಂಸ್ಕೃತಿಕ ವಿಚಾರ ಸಂಕಿರಣಗಳಲ್ಲಿ ತಮ್ಮದೇ ಆದ ವಿಶಿಷ್ಟ ಅಧ್ಯಯನನಿಷ್ಠ ಉಪನ್ಯಾಸಗಳಿಗೆ ಹೆಸರಾಗಿದ್ದರು. ಅಸ್ಖಲಿತ ವಾಣಿಯಿಂದ ಕೇಳುಗರನ್ನು ಮಂತ್ರಮುಗ್ಧಗೊಳಿಸುವ ಆಕರ್ಷಕ ವಾಕ್ಚಾತುರ್ಯ ಅವರಿಗೆ ಸಿದ್ಧಿಸಿತ್ತು.

ಶ್ರೀಯುತರು ಸಾಹಿತ್ಯದಲ್ಲಿ ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಹೆಸರಾಗಿದ್ದರು. ಬುದ್ಧ, ಬಸವ, ಅಂಬೇಡ್ಕರ್ ಅವರ ಚಿಂತನೆಗಳನ್ನು ಅನುಸರಿಸುತ್ತಿದ್ದರು. ಶಿವಶರಣರ, ತತ್ವಾನುಭಾವಿಗಳ, ಸೂಫಿಸಂತರ ಮಾನವೀಯ ಅಂತಃಕರಣದ ಮತ್ತು ಸೌಹಾರ್ದತೆಯ ವಿಚಾರಗಳನ್ನು ಮೈಗೂಡಿಸಿಕೊಂಡಿದ್ದರು...... ಬಂಧು ಬಳಗದವರ, ಆತ್ಮೀಯ ಸ್ನೇಹಿತರ, ಸಹೋದ್ಯೋಗಿಗಳ, ವಿದ್ಯಾರ್ಥಿಮಿತ್ರರ ನೋವು ನಲಿವುಗಳಿಗೆ ತತ್‌ಕ್ಷಣ ಸ್ಪಂದಿಸಿ, ತಮ್ಮ ಜೀವದ ಹಂಗು ತೊರೆದು ನೆರವಿಗೆ ಧಾವಿಸುತ್ತಿದ್ದ ಆಪತ್ಬಂಧು ಅವರಾಗಿದ್ದರು. ಇಂತಹ ಅನುಪಮ ಸಾಧಕ ಸಾಹಿತಿಯೊಬ್ಬರು ನಮ್ಮ ಜೊತೆಗಿದ್ದರು; ಈಗಿಲ್ಲ ಎನ್ನುವುದೇ ಆಘಾತಕಾರಿ ಸಂಗತಿಯಾಗಿದೆ........

ಡಾ. ಈಶ್ವರಯ್ಯನವರ ಸಮೀಪವರ್ತಿಗಳ ವಲಯದಲ್ಲಿ ಅವರ ವ್ಯಕ್ತಿತ್ವದ ಛಾಪು ಸದಾ ಇದ್ದೇ ಇರುತ್ತದೆ. ಜೊತೆಗೆ ಸಾರಸ್ವತ ಲೋಕದಲ್ಲಿಯೂ ನೆನಪು ಹಸಿರಾಗಿರುವಂತೆ ಮಾಡಲು ಮತ್ತು ಅವರ ಸಮಗ್ರ ಗುಣಮಟ್ಟದ ವ್ಯಕ್ತಿತ್ವವನ್ನು ದಾಖಲಿಸುವ ನಿಟ್ಟಿನಲ್ಲಿ, 'ನೆನಪೇ ನಂದಾದೀಪ' ಎಂಬ ಶೀರ್ಷಿಕೆಯಲ್ಲಿ 'ಸಂಸ್ಮರಣ ಸಂಪುಟ' ಸಿದ್ಧಪಡಿಸಲಾಗಿದೆ. ಈ ನೆನಪಿನ ಹೊತ್ತಿಗೆಯು ಒಂದು ರೀತಿಯಲ್ಲಿ ಅವರ ಚೇತನಾತ್ಮಕ್ಕೆ ಸಮರ್ಪಿಸುವ ಗೌರವ ಗುಚ್ಛವೇ ಆಗಿದೆ........

(ಪ್ರಧಾನ ಸಂಪಾದಕರ ನುಡಿಯಿಂದ)

ಡಾ. ಈಶ್ವರಯ್ಯ ಮಠ ಅವರು ನಮ್ಮೊಂದಿಗೆ ಹೊಂದಿರುವ ಅನುಭವದ ಬೆಳಕು ನಮ್ಮೆಲ್ಲರ ಜೀವನವಿಡೀ ಜೊತೆಗಿರುವ ಅಮೂಲ್ಯವಾದ ಸ್ಮರಣೆಯಾಗಿದೆ. ಅನೇಕ ಕವಿಗಳು ಹೇಳುವ 'ಸ್ಮರಣೆಯೊಂದೇ ಸಾಲದೇ', 'ನೆನಪುಗಳು ಸಾಯುವುದಿಲ್ಲ' ಮುಂತಾದ ಉಕ್ತಿಗಳಂತೆ ಈಶ್ವರಯ್ಯನವರು ಯಾವಾಗಲೂ ನಮ್ಮ ಹೃದಯದೊಳಗೆ ನಿರಂತರ ನಂದಾದೀಪವಾಗಿ ಉಳಿದಿರುವುದಕ್ಕೆ ಸಾಕ್ಷಿಯಾಗಿ ಪ್ರಸ್ತುತ 'ನೆನಪೇ ನಂದಾದೀಪ' ಸಂಪುಟವನ್ನು ಓದುಗರ ಕೈಗಿಡುತ್ತಿದ್ದೇವೆ...... 'ಕುವೆಂಪು' ಅವರನ್ನು 'ಅಣ್ಣನ ನೆನಪಾಗಿ' ತೇಜಸ್ವಿಯವರು ಸ್ಮರಿಸಿದಂತೆ; ನಾವೆಲ್ಲರೂ ಈಶ್ವರಯ್ಯನವರನ್ನು ಇಲ್ಲಿ ನೆನಪಿಸಿಕೊಂಡಿದ್ದೇವೆ......... ಈ ಹೊತ್ತಿಗೆ ಹೊರತರುವವರೆಗೆ ನೇರವಾಗಿ ಮತ್ತು ಪೂರಕವಾಗಿ ನೆರವು ನೀಡಿದ ಎಲ್ಲರಿಗೂ ಹಾರ್ದಿಕ ವಂದನೆಗಳು.

(ಸಂಪಾದಕರ ನುಡಿಯಿಂದ)



ISBN 9381718636
9 789381 718636

ಬೆಲೆ ರೂ. 600/-

**ಪವಿತ್ರ ಪ್ರಕಾಶನ**
ಸರಸ್ವತಿಪುರ, ವಿಶ್ವವಿದ್ಯಾಲಯ ಅಂಚೆ
ಕಲಬುರಗಿ -585 106